ದಿನಾಂಕಃ 21-03-2017 ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

ಮುಖ್ಯ ವಿಚಾರಣೆಃ ವಾದಿ ಪರಃ ಶ್ರೀ ಸಿ ಎಸ್ ಎಸ್ ವಕೀಲರಿಂದಃ

ನಾನು ಮುಖ್ಯ ವಿಚಾರಣೆಯಲ್ಲಿ ಪ್ರಮಾಣ ಪತ್ರವನ್ನು ಸಲ್ಲಿಸಿದ್ದೇನೆ. ಸದರಿ ಪ್ರಮಾಣ ಪತ್ರಿಕೆಯಲ್ಲಿ ಹೇಳಿರುವ ಅಂಶಗಳನ್ನು ನಾನೇ ಹೇಳಿ ಬರೆಯಿಸಿದ್ದೇನೆ ಹಾಗೂ ಅವು ಸತ್ಯವಾಗಿರುತ್ತವೆಂದು ಪ್ರಮಾಣೀಕರಿಸುತ್ತೇನೆ. ಸದರಿ ಪ್ರಮಾಣ ಪತ್ರಿಕೆಯಲ್ಲಿನ ಅಂಶಗಳನ್ನು ಓದಿ ತಿಳಿದುಕೊಂಡು ಸಹಿ ಮಾಡಿರುತ್ತೇನೆ.

ನನ್ನ ಮುಖ್ಯವಿಚಾರಣೆ ಪೂರಕವಾಗಿ ಈ ಕೆಳಕಂಡ ದಾಖಲಾತಿಗಳನ್ನು ಹಾಜರುಮಾಡಿದ್ದು , ಅವುಗಳನ್ನು ನೋಡಿ ಗುರುತಿಸಿದ್ದೇನೆ.

1. ನಾನು ಹೇಳಿ ಬರೆಸಿದ್ದ ಗ್ರಾಮ ಲೆಕ್ಕಾಧಿಕಾರಿಯವರು ನೀಡಿದ ವಂಶವೃಕ್ಷದ ಪ್ರತಿಯನ್ನು ನಿಪಿ-1
2. 2012-13ನೇ ಸಾಲಿನ ಸರ್ವೆ ನಂಃ 22/1 ಮನುಗನಹಳ್ಳಿ ಗ್ರಾಮದ ಪಹಣಿಪತ್ರಿಕೆಯನ್ನು ನಿಪಿ-2 ಎಂದು,
3. 2012-13ನೇ ಸಾಲಿನ ಸರ್ವೆ ನಂಃ 23 ಮನುಗನಹಳ್ಳಿ ಗ್ರಾಮದ ಪಹಣಿಪತ್ರಿಕೆಯನ್ನು ನಿಪಿ-3 ಎಂದು,
4. 2012-13ನೇ ಸಾಲಿನ ಸರ್ವೆ ನಂಃ 62/1 ಮನುಗನಹಳ್ಳಿ ಗ್ರಾಮದ ಪಹಣಿಪತ್ರಿಕೆಯನ್ನು ನಿಪಿ-4 ಎಂದು,
5. 2012-13ನೇ ಸಾಲಿನ ಸರ್ವೆ ನಂಃ 62/10 ಮನುಗನಹಳ್ಳಿ ಗ್ರಾಮದ ಪಹಣಿಪತ್ರಿಕೆಯನ್ನು ನಿಪಿ-5 ಎಂದು,
6. 2012-13ನೇ ಸಾಲಿನ ಹುಸೇನ್‌ಪುರದ ನಾಲಾ ಸರ್ವೆ ನಂಃ 246/1 ಪಹಣಿಪತ್ರಿಕೆಯನ್ನು ನಿಪಿ-6 ಎಂದು,
7. 1998 ರಿಂದ 2000ದವರೆಗಿನ ಮನುಗನಹಳ್ಳಿ ಗ್ರಾಮದ ಪಂಚಾಯಿತಿಯವರು ನೀಡಿದ 3 ಡಿಮ್ಯಾಂಡ್ ರಿಜಿಸ್ಟರ್‌ನ ನಕಲುಗಳ ಪ್ರತಿಯನ್ನು ನಿಪಿ-7 ರಿಂದ 9 ಎಂದು ಗುರುತಿಸಲಾಯಿತು.

ಆದ್ದರಿಂದ ನಾನು ದಾವೆಯಲ್ಲಿ ಕೋರಿದ್ದಂತೆ ದಾವೆಯನ್ನು ಡಿಕ್ರಿ ಮಾಡಬೇಕೆಂದು ಕೋರಿಕೊಳ್ಳುತ್ತೇನೆ.

ಪಾಟೀ ಸವಾಲುಃ ಪ್ರತಿವಾದಿ ಪರಃ ವಕೀಲರವರಿಂದಃ

ಕಾಲಾವಕಾಶಕೋರಿದ್ದರಿಂದ ಮುಂದೂಡಲಯಿತು.

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸ.ಇದೆ.

ಸಿವಿಲ್ ಮತ್ತು ಜೆ.ಎಂ.ಎಫ್.ಸಿ.
ನ್ಯಾಯಾಧೀಶರು,ಹುಣಸೂರು